# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಕೆ.ಸುನೀಲ್, ಕಿರಿಯ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಗುಂಡ್ಲುಪೇಟೆ ಇವರ ಪತ್ನಿಯ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಬಗ್ಗೆ.

**ಓದಲಾಗಿದೆ:**
1. ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ಚಾಮರಾಜನಗರ ಇವರ ಪತ್ರ ಸಂಖ್ಯೆ: ಕಾ.ಇಂ/ ಗ್ರಾ.ಕು.ನೀ ಮತ್ತು ನೈ.ಇ/ಚಾ.ನ.ವಿ/ವೈ.ವೆ.ಮ.ಪಾ/ ಮೇಲುಸಹಿ/2020-2021/138 ದಿನಾಂಕ: 01.06.2021
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 31 ಎಸ್.ಎಂ.ಆರ್. 2014, ದಿನಾಂಕ: 05.11.2015.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 48 ಎಸ್.ಎಂ.ಆರ್ 2018, ದಿನಾಂಕ: 20.05.2019

**ಪ್ರಸ್ತಾವನೆ:**

ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ಚಾಮರಾಜನಗರ ಇವರು ಮೇಲೆ ಕ್ರಮ ಸಂಖ್ಯೆ (1) ರ ದಿನಾಂಕ: 01.06.2021 ರ ಪತ್ರದಲ್ಲಿ ಶ್ರೀ ಕೆ.ಸುನೀಲ್, ಕಿರಿಯ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಗುಂಡ್ಲುಪೇಟೆ ಇವರು ತಮ್ಮ ಪತ್ನಿಯ ಹೆರಿಗೆಗೆ ಸಂಬಂಧಿಸಿದಂತೆ ದಿನಾಂಕ: 03.08.2020 ರಿಂದ 08.10.2020 ರ ವರೆಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆಯಾದ MOTHERWOOD WOMENS AND CHILDERN HOSPITAL ಬೆಂಗಳೂರು ಇಲ್ಲಿ ಚಿಕಿತ್ಸೆಗೆ ಒಳಪಟ್ಟಿದ್ದು. ಸದರಿ ಚಿಕಿತ್ಸೆಗೆ ರೂ.12,50,703/-ಗಳ ವೆಚ್ಚವಾಗಿದ್ದು. ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ, ಬೆಂಗಳೂರು ಇವರು ರೂ.2,36,767/-ಗಳನ್ನು (ಎರಡು ಲಕ್ಷದ ಮೂವತ್ತಾರು ಸಾವಿರದ ಏಳುನೂರ ಅರವತ್ತೇಳು ಮಾತ್ರ) ಪಾವತಿಸಲು ಅಭಿಪ್ರಾಯ ನೀಡಿದ್ದು. ಅದರಂತೆ ಸದರಿ ಮೊತ್ತವನ್ನು ಮರುಪಾವತಿಸಲು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶ ದಿನಾಂಕ: 05.11.2015 ರಲ್ಲಿ ತಿಳಿಸಿರುವ ಅಂಶಗಳ ಅನ್ವಯ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಶ್ರೀ ಕೆ.ಸುನೀಲ್, ಕಿರಿಯ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಗುಂಡ್ಲುಪೇಟೆ ಇವರು ತಮ್ಮ ಪತ್ನಿಯ ಹೆರಿಗೆಗೆ ಸಂಬಂಧಿಸಿದಂತೆ ದಿನಾಂಕ: 03.08.2020 ರಿಂದ 08.10.2020 ರ ವರೆಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆಯಾದ MOTHERWOOD WOMENS AND CHILDERN HOSPITAL ಬೆಂಗಳೂರು ಇಲ್ಲಿ ಚಿಕಿತ್ಸೆಗೆ ಒಳಪಟ್ಟಿದ್ದು, ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ರೂ.2,36,767/-ಗಳನ್ನು (ಎರಡು ಲಕ್ಷದ ಮೂವತ್ತಾರು ಸಾವಿರದ ಏಳುನೂರ ಅರವತ್ತೇಳು ಮಾತ್ರ) ಪಾವತಿಸಲು ಅಭಿಪ್ರಾಯ ನೀಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಸರ್ಕಾರದ ಆದೇಶದಲ್ಲಿ ಕಲ್ಪಿಸಿರುವ ಅವಕಾಶದನ್ವಯ ಶ್ರೀ ಕೆ.ಸುನೀಲ್, ಕಿರಿಯ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಗುಂಡ್ಲುಪೇಟೆ ಇವರ ಪತ್ನಿಯ ವೈದ್ಯಕೀಯ ಚಿಕಿತ್ಸೆಗೆ ತಗುಲಿದ ವೆಚ್ಚದ ಪೈಕಿ ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರು ಇವರು ನೀಡಿರುವ ಅಭಿಪ್ರಾಯದಂತೆ ರೂ.2,36,767/-ಗಳನ್ನು ಚಿಕಿತ್ಸಾ ಮೊತ್ತವೆಂದು ಮರು ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:-

..2

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 98 ಜಿಡ್‌ಪಿಎ 2021**
**ಬೆಂಗಳೂರು, ದಿನಾಂಕ: 17.02.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರವು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರ ನಿಯಮ 31 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 14 ನ್ನು ಸಡಿಲಿಸಿ, ಪತ್ರದಲ್ಲಿ ಶ್ರೀ ಕೆ.ಸುನೀಲ್, ಕಿರಿಯ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಗುಂಡ್ಲುಪೇಟೆ ಇವರು ತಮ್ಮ ಪತ್ನಿಯ ಹೆರಿಗೆಗೆ ಸಂಬಂಧಿಸಿದಂತೆ ದಿನಾಂಕ: 03.08.2020 ರಿಂದ 08.10.2020 ರ ವರೆಗೆ ಕರ್ನಾಟಕ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆಯದ ಖಾಸಗಿ ಆಸ್ಪತ್ರೆಯಾದ MOTHERWOOD WOMENS AND CHILDERN HOSPITAL ಬೆಂಗಳೂರು ಇಲ್ಲಿ ಪಡೆದಿರುವುದನ್ನು ಒಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಸದರಿ ಚಿಕಿತ್ಸಾ ವೆಚ್ಚದ ಪೈಕಿ ರೂ.2,36,767/-ಗಳನ್ನು (ಎರಡು ಲಕ್ಷದ ಮೂವತ್ತಾರು ಸಾವಿರದ ಏಳುನೂರ ಅರವತ್ತೇಳು ಮಾತ್ರ) ಅರ್ಹತಾ ಮೊತ್ತವೆಂದು ಮರುಪಾವತಿಸಲು ಸರ್ಕಾರದ ವಿಶೇಷ ಮಂಜೂರಾತಿ ನೀಡಿದೆ.

ಸದರಿ ಕ್ಲೇಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರ ಮೂಲಗಳಿಂದ ಹಿಂಪಡೆದಿರುವುದಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

17/2

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

17/02/2022

**ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ ಬೆಂಗಳೂರು.
2. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ಚಾಮರಾಜನಗರ – ವೈದ್ಯಕೀಯ ವೆಚ್ಚದ ಮೂಲ ಬಿಲ್ಲುಗಳನ್ನು ಲಗತ್ತಿಸಿದೆ. ನೋಂದಣಿ ಅಂಚೆ ಮುಖಾಂತರ.
6. ಶ್ರೀ ಕೆ.ಸುನೀಲ್, ಕಿರಿಯ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಗುಂಡ್ಲುಪೇಟೆ.

**ಪ್ರತಿಯನ್ನು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಜಂಟಿ ಕಾರ್ಯದರ್ಶಿಗಳು (ಆಡಳಿತ-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ.
3. ಶಾಖಾ ರಕ್ಷಾ ಕಡತ / ವೆಬ್ ಸೈಟ್ ನಲ್ಲಿ ಪ್ರಕಟಿಸಲು ಶಾಖಾ ರಕ್ಷಾ ಕಡತ.